**<u>ಸಾಕ್ಷಿಯನ್ನು ದಿನಾಂಕ:19.01.2026 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಪಾಟೀ ಸವಾಲು: ಅರ್ಜಿದಾರರ ಪರ ಶ್ರೀ. ಡಿ ಎಸ್ ವಕೀಲರಿಂದ:</u>**

ಅರ್ಜಿದಾರರು ಈ ಅರ್ಜಿಯನ್ನು ತಮ್ಮದು ಎಂದು ಸಲ್ಲಿಸಿರುತ್ತಾರೆ. ನನ್ನ ತಂದೆ ಏನು ತಕರಾರು ಸಲ್ಲಸಿದ್ದರು ಎಂದು ನಾನು ತಿಳಿದುಕೊಂಡಿಲ್ಲ. ಅಸಲು ದಾವಾ ನಂ.455/2017 ದಾವೇ ಏನಾಗಿರುತ್ತದೆ ಎಂದು ನಾನು ತಿಳಿದುಕೊಂಡಿಲ್ಲ. ಸದರಿ ದಾವೇಯಲ್ಲಿ ನಾನೇ ವಿಚಾರಣೆ ನೀಡಿರುತ್ತೇನೆ ಎಂದರೆ ಸರಿ. ಸದರಿ ದಾವೇ ನಮಗೆ ಯಾವುದೇ ಹಕ್ಕಿ ಇಲ್ಲ ಎಂದು ವಜಾ ಆಗಿರುತ್ತದೆ ಎಂದರೆ ಸಾಕ್ಷಿಯು ತನಗೆ ಗೊತ್ತಿಲ್ಲವೆಂದು ನುಡಿಯುತ್ತಾರೆ.

2. ನಿಪಿ.1ರ ತೀರ್ಪು ಅರ್ಜಿದಾರರ ಪರವಾಗಿ ಆಗಿತ್ತು ಎಂದರೆ ಸಾಕ್ಷಿಯು ತನಗೆ ಗೊತ್ತಿಲ್ಲವೆಂದು ನುಡಿಯುತ್ತಾರೆ. ದಾವಾ ಆಸ್ತಿಯಲ್ಲಿ ಅರ್ಜಿದಾರರೇ ಅಂದಿನಿಂದ ಇಲ್ಲಿಯವರೆಗೆ ಸ್ವಾಧೀನದಲ್ಲಿರುತ್ತಾರೆ ಎಂದರೆ ಸಾಕ್ಷಿಯು ತಾವೇ ಸ್ವಾಧೀನದಲ್ಲಿರುತ್ತೇವೆ ಎಂದು ನುಡಿಯುತ್ತಾರೆ. ಅರ್ಜಿದಾರರ ಸ್ವಾಧೀನಕ್ಕೆ ನಾವು ತೊಂದರೆ ನೀಡುತ್ತಿದ್ದೆವು ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು, 2017 ರಿಂದ ಪಹಣಿಯಲ್ಲಿ ತನ್ನ ತಂದೆಯ ಹೆಸರು ಇದೆ ಎಂದು ನುಡಿಯುತ್ತಾರೆ. ನಾನು ಹೇಳಿದ ಪಹಣಿ ಮತ್ತು ನಮ್ಮ ಕ್ರಯಪತ್ರದ ಬಗ್ಗೆ ನ್ಯಾಯಾಲಯ ವಿಮರ್ಶಿಸಿ ನಮ್ಮ ದಾಖಲೆಗಳು ಊರ್ಜಿತವಲ್ಲ ಎಂದು ತೀರ್ಮಾನಿಸಿರುತ್ತದೆ ಎಂದರೆ ಸರಿಯಲ್ಲ. ಅರ್ಜಿದಾರರ ಸ್ವಾಧೀನಕ್ಕೆ ತೊಂದರೆ ನೀಡಿದ ಕಾರಣ, ಅರ್ಜಿದಾರರು ದಾವೇ ಸಲ್ಲಿಸಿರುತ್ತಾರೆ ಎಂದರೆ ಸಾಕ್ಷಿಯು 28 ಗುಂಟೆಯಲ್ಲಿ 18 ಗುಂಟೆಯಲ್ಲಿ ತಾವು ಸ್ವಾಧೀನದಲ್ಲಿದ್ದು, ಉಳಿದ 9 ಗುಂಟೆಯಲ್ಲಿ ಸ್ವಾಧೀನದಲ್ಲಿರುತ್ತಾರೆ ಎಂದು ನುಡಿಯುತ್ತಾರೆ. ಅರ್ಜಿದಾರರು ಸ್ವಾಧೀನದಲ್ಲಿರುವ 9 ಗುಂಟೆಗೆ ನಾವು ತೊಂದರೆ ನೀಡುತ್ತಿದ್ದೇವೆ ಎಂದರೆ ಸರಿಯಲ್ಲ.

Ex.**No.26/2021**
**D.W-1**

**ಮರುವಿಚಾರಣೆಃ ಇಲ್ಲ**

*( ತೆರದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು .)*

ಓ. ಹೇ.ಕೇ. ಸರಿ ಇದೆ.

ಪ್ರಧಾನ ದಿವಾಣಿ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ .ದಂ .
ಕುಣಿಗಲ್.